SC No.26/2022
CW-04 / PW-05

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 26/2022

ಚಾ.ಸಾಃ 04 ಪ್ರಾ.ಸಾಃ 05

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 24.12.2025

| | | |
|---|---|---|
| ಸಾಕ್ಷಿಯ ಹೆಸರು | : | ಗಜೇಂದ್ರ |
| ತಂದೆಯ ಹೆಸರು | : | ತುಕರಾಮ್ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಹೆಚ್.ಸಿ ನಂ.120 (123) ಶಹಪೂರ ಪಿ.ಎಸ್ |
| ವಿಳಾಸ | : | ಶಹಪೂರ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ 2019 ರಿಂದ 2024 ವರೆಗೆ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸಿಪಿಐ ರವರು ನಮ್ಮನ್ನು ಸೇರಿದಂತೆ ಗುನ್ಹೆ ನಂಬರ್ 74/2021 ರಲ್ಲಿ ಆರೋಪಿ ಮತ್ತು ಕಳ್ಳತನದ ವಸ್ತು ಪತ್ತೆ ಮಾಡುವುದಕ್ಕಾಗಿ ತಂಡ ರಚಿಸಿದ್ದರು. ಚಾಸಾ-1, 5 ರಿಂದ 7 ಇವರು ತಂಡದಲ್ಲಿ ಇದ್ದರು. ನಂತರ ಹೇಮನಾಳ ಗ್ರಾಮದಲ್ಲಿ ಆರೋಪಿತರು ಇರುವ ಮಾಹಿತಿ ಬಂದಿದ್ದರಿಂದ ನಾವು ದಿನಾಂಕ 13.07.2021 ರಂದು ಮಧ್ಯಾಹ್ಣ 03:00 ಗಂಟೆಯ ಸಮಯದಲ್ಲಿ ಹನುಮಾನ ಟೆಂಪಲ್ ಹತ್ತಿರ ಹೋದಾಗ ಫಾರುಕ್ ಈತನು ಓಡಿ ಹೋದನು. ಸ್ಥಳದಲ್ಲಿ ಹೊನ್ನಯ್ಯ ಈತನನ್ನು ನಾವು ಹಿಡಿದೆವು. ನಂತರ ಚಾಸಾ-1 ಪಿ.ಎಸ್.ಐ ರವರು ಹೊನ್ನಯ್ಯನ ಮನೆಯವರನ್ನು ಕರೆಯಿಸಿ ಆತನನ್ನು ದಸ್ತಗಿರಿ ಮಾಡುತ್ತಿರುವುದಾಗಿ ತಿಳಿಸಿದರು. ನಂತರ ಆತನನ್ನು ಕರೆದುಕೊಂಡು ಹೋಗುತ್ತಿದ್ದಾಗ ರಾಯಕುಂಪಿ ಗ್ರಾಮದ ಹತ್ತಿರ 15-20 ಜನರು ಗುಂಪು ರಚಿಸಿಕೊಂಡು ಬಂದು ನಮ್ಮ ಗಾಡಿಯನ್ನು ತಡೆದು ನಮಗೆ ಅವಾಚ್ಯ ಶಬ್ದಗಳಿಂದ ಬೈದರು. ಆಗ ಸಂಜೆ 05:30 ರ

ಸಮಯವಾಗಿತ್ತು. 1 ನೇ ಆರೋಪಿಯ ಪ್ರಚೋದನೆಯ ಮೇರೆಗೆ ಆ ಜನರು ನಮ್ಮನ್ನು ತಡೆದು ನಾಲ್ಕನೇ ಆರೋಪಿತನು ಚಾಸಾ-4 ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದನು. ಆಗ ಚಾಸಾ-1 ತಪ್ಪಿಸಿಕೊಂಡರು. 5 ನೇ ಆರೋಪಿ ಚಾಸಾ-1 ರವರ ಮರ್ಮಾಂಗಕ್ಕೆ ಒದೆಯಲು ಹೋದನು, ಆಗ ಚಾಸಾ-1 ತಪ್ಪಿಸಿಕೊಂಡರು. ಚಾಸಾ.5 ರವರಿಗೆ 2 ನೇ ಆರೋಪಿ ಕಟ್ಟಿಗೆಯಿಂದ ಎಡಕಣ್ಣಿನ ಮೇಲೆ ಹೊಡೆದನು. ನನಗೆ, ಹೆಚ್.ಸಿ 31 ಮತ್ತು ಪಿಸಿ 267 ರವರಿಗೆ ಆರೋಪಿತರು ಕೈಗಳಿಂದ, ಕಲ್ಲು ಮತ್ತು ಕಟ್ಟಿಗೆಗಳಿಂದ ಹೊಡೆದರು.

(ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿರುವುದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು).

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.

ಸಾಕ್ಷಿಯನ್ನು ದಿನಾಂಕ 24.12.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರಕಾರಿ ಅಭಿಯೋಜಕರಿಂದಃ-**

02. ನಂತರ ಗಬ್ಬೂರು ಪೋಲಿಸ್ ಠಾಣೆಯ ಪಿ.ಎಸ್.ಐ ಮತ್ತು ಸಿಬ್ಬಂದಿ ಮತ್ತು ಸಾರ್ವಜನಿಕರು ಬಂದು ನಮ್ಮನ್ನು ಬಿಡಿಸಿದರು. ನಂತರ ನಾವು ವಡಗೇರಾ ಸರಕಾರಿ ಆಸ್ಪತ್ರೆಗೆ ಹೋಗಿ ದಾಖಲಾದೆವು. ನಂತರ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದೆವು. ಹೊನ್ನಯ್ಯನನ್ನು ನಾವು ಕರೆದುಕೊಂಡು ಹೋಗುತ್ತಿರುವಾಗ ಅವನನ್ನು ಬಿಡಿಸಬೇಕು ಎನ್ನುವ ಉದ್ದೇಶದಿಂದ ಈ ರೀತಿ ಹಲ್ಲೆ ಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ 1 ರಿಂದ 10 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

03. ಸಾಕ್ಷಿಯು ಮು.ಮಾ.1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ.

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

04. ಯಾದಗಿರಿ ನಗರ ಪೋಲಿಸ್ ಠಾಣೆಯ ಯಾವುದೇ ಬೀಟ್ ನಲ್ಲಿ ನನ್ನನ್ನು ಕರ್ತವ್ಯಕ್ಕೆ ನೇಮಿಸಿರಲಿಲ್ಲ. ತಂಡ ರಚನೆ ಮಾಡಿದ ಬಗ್ಗೆ ನಮಗೆ ಪಾಸ್ ಪೋರ್ಟ್ ಕೊಟ್ಟಿದ್ದರು ಆದರೆ ನಮಗೆ ಬೇರೆ ಆದೇಶ ಕೊಟ್ಟಿರಲಿಲ್ಲ. ದಿನಾಂಕ 12.07.2021 ರಂದು ವಡಗೇರಾ ಪೋಲಿಸ್ ಠಾಣೆಯಲ್ಲಿ ನಾನು ರಿಪೋರ್ಟ್ ಮಾಡಿಕೊಂಡೆನು, ಸಮಯ ನೆನಪಿಲ್ಲ. ನಾನು ರಿಪೋರ್ಟ್ ಮಾಡಿಕೊಂಡ ಬಗ್ಗೆ ಠಾಣೆಯ ಎಸ್.ಹೆಚ್.ಡಿಯಲ್ಲಿ ನಮೂದು ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕ 12.07.2021

ರಿಂದ ಮರುದಿನದ ವರೆಗೆ ನಾನು ವಡಗೇರಾದಲ್ಲಿಯೇ ಇದ್ದೆನು. ಸಾಕ್ಷಿ ಮತ್ತೆ ಹೇಳುತ್ತಾರೆ ಯಾದಗಿರಿಗೆ ಬಂದು ಮತ್ತೆ ವಡಗೇರಾಕ್ಕೆ ಬಂದೆನು.

05. ವಡಗೇರಾ ಠಾಣೆಯಿಂದ ಹನುಮಾನ ಟೆಂಪಲ್ ಹತ್ತಿರ ಗುನ್ನೆ ಸ್ಥಳ ಎಷ್ಟು ಕಿ.ಮಿ ದೂರ ಇದೆ ಎಂದು ಗೊತ್ತಿಲ್ಲ. ವಡಗೇರಾ ಠಾಣೆಯಿಂದ ಗುನ್ನೆ ಸ್ಥಳಕ್ಕೆ ಖಾಸಗಿ ಬುಲೆರೋ ವಾಹನದಲ್ಲಿ ಹೋದೆವು. ಹೆಚ್.ಸಿ 31 ಗಣಪತಿ ಇವರು ಸದರಿ ಬುಲೆರೋ ವಾಹನವನ್ನು ಚಾಲನೆ ಮಾಡುತ್ತಿದ್ದರು. ವಡಗೇರಾ ಠಾಣೆಯಿಂದ ಬೆಳಗಿನ 09.30 ಕ್ಕೆ ಹೊರಟೆವು. ಹನುಮಾನ ಟೆಂಪಲ್ ಹತ್ತಿರ ನಾವು ತಲುಪಿದಾಗ ಮಃ03.00 ಗಂಟೆಯಾಗಿತ್ತು. ಹನುಮಾನ ಟೆಂಪಲ್ ಹತ್ತಿರ ಅಗಸಿ ಕಟ್ಟೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಹನುಮಾನಗುಡಿ ಮಾತ್ರ ನೋಡಿದ್ದೆನೆ ಬೇರೆ ಯಾವುದೇ ತಲೆಯಲ್ಲಿ ಇಲ್ಲ. ಅಲ್ಲಿ ಅಂಗನವಾಡಿ ಇದೆ ಎನ್ನುವುದು ನನಗೆ ನೆನಪಿಲ್ಲ. ಅಲ್ಲಿ ಸುತ್ತ-ಮುತ್ತಲು ಮನೆಗಳು, ಅಂಗಡಿಗಳು ಇರುತ್ತವೆ ಎನ್ನುವುದು ನೆನಪಿಲ್ಲ. ಅಲ್ಲಿ ಶಾಲೆ ಇದೆ ಎನ್ನುವುದು ನೆನಪಿಲ್ಲ.

06. ಫಾರುಕ್ ಓಡಿ ಹೋದನು, ಆದರೆ ಯಾವ ಕಡೆ ಓಡಿ ಹೋದನು ಎಂದು ಹೇಳಲು ಗೊತ್ತಾಗುವುದಿಲ್ಲ. ನಮ್ಮ ವಾಹನವನ್ನು ಮುಖ್ಯರಸ್ತೆಯ ದಂಡೆಯಲ್ಲಿ ಪಾರ್ಕ್ ಮಾಡಿದ್ದೆವು. ನಾವು ವಾಹನವನ್ನು ಪಾರ್ಕ್ ಮಾಡಿದ ಸ್ಥಳದಿಂದ ಹನುಮಾನ ಟೆಂಪಲ್ ಎಷ್ಟು ದೂರ ಇತ್ತು ಎಂದು ಹೇಳಲಾಗುವುದಿಲ್ಲ. ಸದರಿ ಗುನ್ನೆ ಸ್ಥಳಕ್ಕೆ ನಾವು ಹೋದಾಗ 6-7 ಜನ ಸಾರ್ವಜನಿಕರು ಸೇರಿದ್ದರು.

07. ಹೊನ್ನಯ್ಯನ ಮನೆಯವರನ್ನು ಸ್ಥಳಕ್ಕೆ ಚಾಸಾ-1 ಕರೆಯಿಸಿದ್ದರು. ಸಾಕ್ಷಿ ಮತ್ತೆ ಹೇಳುತ್ತಾರೆ ಹೊನ್ನಯ್ಯನೇ ಗಾಭರಿಯಾಗಿ ಅವರ ಮನೆಯವನ್ನು ಕರೆದಿದ್ದಾನೆ. ಈ ರೀತಿ ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಸದರಿ ಸ್ಥಳದಲ್ಲಿ 03.00 ಗಂಟೆಯಿಂದ 05.00 ಗಂಟೆವರೆಗೆ ಇದ್ದೆವು, 05.30 ಕ್ಕೆ

ಅಲ್ಲಿಂದ ಬಿಟ್ಟೆವು. ಹೊನ್ನಯ್ಯನನ್ನು ಅರೆಸ್ಟ ಮಾಡಿದ ಬಗ್ಗೆ ಚಾಸಾ-1 ಆತನ ಸಂಬಂಧಿಕರಿಗೆ ಲಿಖಿತ ತಿಳುವಳಿಕೆ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

08. ಗುನ್ನೆ ಸ್ಥಳದಿಂದ ನಮ್ಮ ಊರಿಗೆ ಹೋಗುವ ಮಧ್ಯದಲ್ಲಿ ಬಹಳ ಹಳ್ಳಿಗಳು ಬರುತ್ತವೆ ಎಂದರೆ ನೆನಪಿಲ್ಲ. ಅಲ್ಲಿ ಹಿರೇರಾಯಕುಂಪಿ ಮತ್ತು ಚಿಕ್ಕರಾಯಕುಂಪಿ ಬರುತ್ತದೆ ಎನ್ನುವುದು ನಿಜ. ಹಿರೇರಾಯಕುಂಪಿಯಲ್ಲಿ ಘಟನೆ ನಡೆದಿದೆ.

09. ಅಲ್ಲಿ ಸೇರಿದ 15 ರಿಂದ 20 ಜನರು ಹೇಮನಾಳ ಗ್ರಾಮದ ಕಡೆಯಿಂದ ಬಂದರು. ಹೇಮನಾಳದಿಂದ ವಡಗೇರೆಗೆ ನಾವು ಹೋಗುವಾಗ ಹಿರೇರಾಯಕುಂಪಿ ದಾಟಿ ಸ್ವಲ್ಪ ಮುಂದೆ ಹೋದ ಮೇಲೆ ಹಳ್ಳದಾಟಿದ ಮೇಲೆ 15 ರಿಂದ 20 ಜನರು ನಮ್ಮ ವಾಹನ ತಡೆದರು. ಹಿರೇರಾಯಕುಂಪಿಯಲ್ಲಿ ಯಾವುದೇ ಹಳ್ಳ ಬರುವುದಿಲ್ಲ ಎಂದರೆ ಸರಿಯಲ್ಲ.

10. ಯಾವ ಆರೋಪಿ ಯಾವ ಅವಾಚ್ಯ ಶಬ್ದಗಳಿಂದ ಬೈದನು ಎಂದು ಗೊತ್ತಿಲ್ಲ.

11. ಗುನ್ನೆ ಸ್ಥಳದಲ್ಲಿ ಸಂಜೆ 05.30 ಕ್ಕೆ ಇದ್ದೆವು. ಘಟನೆಯು ಒಂದು ತಾಸಿಗೂ ಹೆಚ್ಚು ನಡೆದಿದೆ, ನಾನು ಸಮಯವನ್ನು ನೋಡಿಲ್ಲ.

12. ಡಿ.ಎಸ್.ಪಿ ರವರ ಕಛೇರಿ ಯಾದಗಿರಿಯಲ್ಲಿ ಇರುತ್ತದೆ. ಯಾದಗಿರಿಯಿಂದ ವಡಗೇರಾ 35 ಕಿ.ಮಿ ದೂರ ಇದೆ. ವಡಗೇರಿಯಿಂದ ಹಿರೇರಾಯಕುಂಪಿ ಎಷ್ಟು ದೂರ ಇದೆ ಎಂದು ನೆನಪಿಲ್ಲ. ಸದರಿ ಸಮಯದಲ್ಲಿ ನಾವು ಎಲ್ಲರೂ ಮಫ್ತಿಯಲ್ಲಿ ಇದ್ದೆವು, ಯುನಿಫಾರ್ಮ್ ಧರಿಸಿರಲಿಲ್ಲ. ನಮ್ಮ ಎಲ್ಲರ ಬಳಿ ಐಡಿ ಕಾರ್ಡ್ ಗಳು ಇದ್ದವು. ನಾವು

ವಡಗೇರಾ ಠಾಣೆಯಿಂದ ಹೋಗುವ ಮೊದಲು ಗಬ್ಬೂರು ಪೋಲಿಸ್ ಠಾಣೆಗೆ ಮಾಹಿತಿ ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಗುನ್ಹೆ ಸ್ಥಳಕ್ಕೆ ಹೋಗುವ ಮೊದಲು ಗಬ್ಬೂರು ಪೋಲಿಸ್ ಠಾಣೆಗೆ ಹೋಗಿರಲಿಲ್ಲ. ಗುನ್ಹಾ ಸ್ಥಳದಿಂದ ನಮ್ಮ ಠಾಣೆಗೆ ಮರಳಿ ಹೋದಾಗ ರಾತ್ರಿ 10.30 ರ ಸಮಯವಾಗಿತ್ತು. ಸಾಕ್ಷಿ ಮತ್ತೆ ಹೇಳುತ್ತಾರೆ ರಾತ್ರಿ 10.15 ಆಗಿತ್ತು. ಸಾಕ್ಷಿ ಮತ್ತೆ ಹೇಳುತ್ತಾರೆ 10.15 ಕ್ಕೆ ನಾವು ಆಸ್ಪತ್ರೆಯಲ್ಲಿ ಆಡ್ಮಿಟ್ ಆಗಿದ್ದೆವು. ನಾವು ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ನರ್ಸ್ ಗಳು ಇದ್ದರು. ನರ್ಸ್‌ಗಳು ನಮಗೆ ಚಿಕಿತ್ಸೆ ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ಎಷ್ಟು ಹೊತ್ತು ಇದ್ದಿರಿ ಎಂದರೆ ಅವರು ಮುಂದೆ ಹೋಗಲು ಬರೆದುಕೊಟ್ಟರು. ಮುಂದೆ ಯಾವುದಾದರೂ ಪ್ರೈವೆಟ್ ಆಸ್ಪತ್ರೆಯಲ್ಲಿ ತೋರಿಸಿಕೊಳಿರಿ ಎಂದು ಬರೆದುಕೊಟ್ಟರು. ನಂತರ ನಾನು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆನೆ, ಆದರೆ ಆಸ್ಪತ್ರೆ ಹೆಸರು ನೆನಪಿಲ್ಲ. ನಾನು ಒಬ್ಬನೇ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಉಳಿದವರು ಅವರ-ಅವರ ಪಾಡಿಗೆ ಅವರು ಹೋದರು. ಉಳಿದವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೋ ಇಲ್ಲವೋ ಗೊತ್ತಿಲ್ಲ. ನಾನು ಚಿಕಿತ್ಸೆ ಪಡೆದ ಖಾಸಗಿ ವೈದ್ಯರ ಹೆಸರು ನೆನಪಿಲ್ಲ.

13. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯ ಅಂದರೆ -

- 1 ನೇ ಆರೋಪಿಯ ಪ್ರಚೋದನೆಯ ಮೇರೆಗೆ ಆ ಜನರು ನಮ್ಮನ್ನು ತಡೆದು ನಾಲ್ಕನೇ ಆರೋಪಿತನು ಚಾಸಾ-4 ರವರಿಗೆ ಕಟ್ಟಿಗೆಯಿಂದ ತಲೆಗೆ ಹೊಡೆದನು. ಆಗ ಚಾಸಾ-1 ತಪ್ಪಿಸಿಕೊಂಡರು. 5 ನೇ ಆರೋಪಿ ಚಾಸಾ-1 ರವರ ಮರ್ಮಾಂಗಕ್ಕೆ ಒದೆಯಲು ಹೋದನು, ಆಗ ಚಾಸಾ-1 ತಪ್ಪಿಸಿಕೊಂಡರು. ಚಾಸಾ.5 ರವರಿಗೆ 2 ನೇ ಆರೋಪಿ ಕಟ್ಟಿಗೆಯಿಂದ ಎಡಕಣ್ಣಿನ ಮೇಲೆ ಹೊಡೆದನು. ನನಗೆ, ಹೆಚ್.ಸಿ 31 ಮತ್ತು ಪಿಸಿ 267 ರವರಿಗೆ ಆರೋಪಿತರು ಕೈಗಳಿಂದ, ಕಲ್ಲು ಮತ್ತು ಕಟ್ಟಿಗೆಗಳಿಂದ ಹೊಡೆದರು. -

ಎಂದು ಹೇಳಿರುವುದು ಸುಳ್ಳು ಇರುತ್ತದೆ ಎನ್ನುವುದು ಸರಿಯಲ್ಲ.

14. ದಿನಾಂಕ 16.07.2021 ರಂದು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೆನೆ. ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಬರೆದುಕೊಟ್ಟಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ನಾನು ಚಾಸಾ-1 ರೊಂದಿಗೆ ಗುನ್ಹೆ ಸ್ಥಳಕ್ಕೆ ಹೋಗಿಲ್ಲ ಎನ್ನುವುದು ಸುಳ್ಳು. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

15. ಗುನ್ಹೆ ಸ್ಥಳದ ರಸ್ತೆಯಲ್ಲಿ ಎಡಬದಿ ಮತ್ತು ಬಲಬದಿಗೆ ಮನೆಗಳು ಇರುತ್ತವೆ ಎನ್ನುವುದು ಸರಿಯಲ್ಲ. ಗುನ್ಹೆ ಸ್ಥಳದಲ್ಲಿ ಏನು ನಡೆಯುತ್ತದೆ ಎಂದು ಹತ್ತಿರದ ಮನೆಗಳಲ್ಲಿ ಕಾಣುತ್ತದೆ ಎನ್ನುವುದು ನಿಜ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.